ಕಳಿಸ್ತಿರಲಿಲ್ಲ. ಮನೆ ಮಕ್ಕಳನ್ನು ನೋಡಿಕೊಂಡು ಹಾಯಾಗಿರಬಾರದೇ?' ಆಗೆಲ್ಲ ಹೌದಲ್ಲ, ತನ್ನದೇ ತಪ್ಪು ಎನಿಸುತ್ತಿತ್ತು. ಆಗ ಮನೆಯಲ್ಲಿ ಕೂತು ಮಾಡುವುದೇನು ಎಂದು ತಾನೆ ಹಟಮಾಡಿ ಕೆಲಸಕ್ಕೆ ಸೇರಿದ್ದಳು. ಈಗ ಬಿಟ್ಟರೆ ಗತಿಯಿಲ್ಲದಂತಾಗಿದೆ. ತನ್ನ ಸಂಬಳದಲ್ಲೇ ಮಕ್ಕಳಿಗೆ, ಮನೆ ಅಲಂಕಾರಕ್ಕೆ, ತನಗೆ ಬಟ್ಟೆ, ಬಸ್ಸ್ ಚಾರ್ಜು ಅಂತಾ ಖರ್ಚು ಮಾಡಿಬಿಡುತ್ತಿದ್ದಳು. ಮಕ್ಕಳಿಗಾಗಿ ಒಂದೆರದು ಪಾಲಿಸಿಗಳನ್ನೂ ಕೊಂಡಿದ್ದಳು. ಮೊದಲೆಲ್ಲ ಬಾಯಿಮುಚ್ಚಿಕೊಂಡಿದ್ದ ರಾಮಪ್ಪ ಬರಬರುತ್ತ ಅವಳು ದುಡಿದು ತನಗೆ ಕೊಡಬೇಕು ಅನ್ನೋ ಹೊಸ ನಿಯಮ ನಿರ್ಬಂಧ ಹೇರತೊಡಗಿದಾಗ ಸಿಡಿದು 'ಲೋಕದಲ್ಲಿ ಗಂಡನಾದವನು ದುಡಿದು ಹೆಂಡತಿಗೆ ಇಂತಿಷ್ಟು ಅಂತಾ ಕೊಡ್ತಾನೆ ಮನೆ ಖರ್ಚಿಗೆ, ನೀನು ಕೊಡೋ ಬದಲು ನನ್ನೇ ಕೇಳ್ತಿಯಲ್ಲ? ನಾನು ಒಂದಿಲ್ಲಾ ಒಂದಕ್ಕೆ ಖರ್ಚು ಮಾಡುವುದಿಲ್ಲವೇ? ಕಳೆದ ಮಹಾನವಮಿಗೆ ಸೋಫಾ ಸೆಟ್ಟು ತಗೊಳಿಲ್ಲವೇ? ಈ ವಾಷಿಂಗ್ ಮಷಿನು ಯಾರು ತಗೊಂಡರು? ಏಸಿ ಹಾಕಿಸಿದ್ದು ಯಾರು? ಎಲ್ಲಿಂದ ತರಲಿ ದುಡ್ಡು? ನನಗೇನು ಲಕ್ಷ ಸಂಪಾದನೆಯಿದೆಯಾ' ಎಂದೆಲ್ಲ ವಾದಿಸಿ ರಾಮಪ್ಪನ ಬಾಯಿ ಮುಚ್ಚಿಸುತ್ತಿದ್ದಳು. ಅದೆಲ್ಲ ರಾಮಪ್ಪನ ತರ್ಕವಷ್ಟೆ. ಇವಳಿಗೆ ನಾನ್ಯಾಕೆ ಸಂಬಳ ಕೊಡಲಿ? ಮನೆಗೆ ತಂದುಹಾಕುತ್ತೀನಲ್ಲಾ, ಸಾಕು. ಬಾಯಿಮುಚ್ಚಿಕೊಂಡು ಬಿದ್ದಿರಲಿ.

ಆದರೆ ಬರಬರುತ್ತ ಜೀವನ ಕ್ರಮವೇ ಅವಳದು ಅವಳಿಗೆ ಇವನದು ಇವನಿಗೆ ಎಂಬಂತಾಗಿ, ರಾಮಪ್ಪನ ಹೆಂಡತಿಯೆನಿಸಿಕೊಂಡರೂ ಸೀತೆಗೆ ಅವನ ಸಂಬಳವೇನು ಅಂತಲೂ ತಿಳಿಯದು. ಅವನ ಹಣಕಾಸಿನ ಬಗ್ಗೆಯಾಗಲಿ, ಅವನ ಸೇವಿಂಗ್ಸ್ ಬಗ್ಗೆಯಾಗಲಿ ಏನೂ ಗೊತ್ತಿಲ್ಲ. ಬೇರೆ ಹೆಣ್ಣುಮಕ್ಕಳು ತಮ್ಮ ಗಂಡಂದಿರ ಬಗ್ಗೆ ಮಾತಾಡುವಾಗೆಲ್ಲ ಸೀತೆ ಬಾಯಿಮುಚ್ಚಿಕೊಂಡು ಕೇಳಿಸಿಕೊಳ್ಳುತ್ತಿರುತ್ತಾಳೆ. ಮಲಯಾಳಿ ವತ್ಸಲೆಯ ಪತಿ ದುಬೈಯಿಂದ ತಂದ ಸೀರೆ, ಒಡವೆಗಳ ಬಗ್ಗೆ ಕೊಚ್ಚಿಕೊಳ್ಳುವಾಗೆಲ್ಲ ಸೀತೆ ಎದ್ದು ತನ್ನ ಟೇಬಲ್‌ಗೆ ಹೋಗುತ್ತಾಳೆ. ತನ್ನ ಸ್ಕಿಜೋಫ್ರೇನಿಯಾ ಹೆಂಡತಿ ಸಂತೋಷವಾಗಿರಲೆಂದು ಜೋಸೆಫ್ ಗೋವೆಯಲ್ಲಿ ಫ್ಲ್ಯಾಟ್ ಖರೀದಿಸಿದ್ದೇನೆಂದು ಹೇಳುವಾಗ, ತಂಗಿಯ ಗಂಡ ಅವಳ ಹುಟ್ಟುಹಬ್ಬಕ್ಕೆ ಸ್ಕೂಟಿ ಕೊಡಿಸಿದಾಗ ಸೀತೆಯ ಹೆಣ್ಣು ಹೃದಯ ತನ್ನೆಲ್ಲಾ ಆಸೆಗಳನ್ನೆಲ್ಲ ಚಿವುಟಿಹಾಕಿ, ತನಗಿಲ್ಲದ್ದನ್ನು ನೆನೆದು ಆಸೆ ಪಡುವುದೇಕೆ ಎಂದು ನಿರ್ವಿಕಾರವಾಗಿರಲು ಯತ್ನಿಸುತ್ತಾಳೆ. ಮನುಷ್ಯ ಜೀವ, ಎಲ್ಲರಂತೆ ಅವಳಿಗೂ ಆಸೆಗಳಿವೆ, ಕನಸುಗಳಿವೆ, ದುರ್ಬಲತೆಗಳಿವೆ. ಕೋಪ ತಾಪಗಳಿವೆ. ಆದರೆ ತನ್ನ ಕೆಟ್ಟ ನಸೀಬಿನ ಮೇಲೂ ಕೋಪವುಕ್ಕುತ್ತದೆ. ಒತ್ತಾಯದಿಂದ, ಹಟಹಿಡಿದು ರಾಮಪ್ಪನಿಗೆ ಗಂಟುಹಾಕಿದ ತಾಯಿಯ ಮೇಲೆ ಆಕೆಯ ರೋಷ ತಿರುಗುತ್ತದೆ. ಪಿತ್ತ ನೆತ್ತಿಗೇರಿದಾಗೊಮ್ಮೆ ಜಗಳಾಡಿದ್ದಾಳೆ ತಾಯಿಯೊಂದಿಗೆ.

'ನೀನೆ ನನ್ನ ಬದುಕನ್ನು ಹಾಳುಮಾಡಿದ್ದು, ಇದ್ದಕ್ಕಿದ್ದಂತೆ ಎದ್ದು ನಡೆದ ಆ ನಿನ್ನ ರಾಮಚಂದ್ರನಂಥ ಅಳಿಯ. ಮಕ್ಕಳನ್ನು ಕಟ್ಟಿಕೊಂಡು ಒಬ್ಬಳೇ ಹೇಗೆ ಬದುಕಲಿ? ನೋಡು ನಾನ್ಯಾರನ್ನಾದರೂ ಕಟ್ಟಿಕೊಂಡು ಓಡಿಯೇ ಹೋಗ್ತೀನಿ' ಎಂದೆಲ್ಲ ತಾಯಿಗೆ ಹೆದರಿಸುವಾಗ ವಿಚಿತ್ರ ಖುಷಿ ಸಿಗುತ್ತಿತ್ತು. ಹಾಗೇ ಹೋಗುವುದಾದರೂ ಎಲ್ಲಿಗೆ? ಮಕ್ಕಳ ಸಹಿತ ನನ್ನನ್ನು ಸ್ವೀಕರಿಸುವವನಾದರೂ ಯಾರು?

ಜೀವನ ದುರ್ಭರವಾಗುತ್ತಲೂ ಮತ್ತೆ ಗಟ್ಟಿಗೊಳ್ಳುತ್ತ ಸಾಗುತ್ತಿದ್ದಳು.

ಲಕ್ಷ್ಮಣನೊಬ್ಬನೇ ಅವಳ ನೋವನ್ನು ಅರಿತುಕೊಂಡ ಸಖ. ಚಿಕ್ಕಂದಿನಿಂದಲೂ ಕಣ್ಣೆದುರೇ